# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು [ರಾಜಾಜಿನಗರ] ರವರ ಕಛೇರಿ, ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು10

---

ಸಂಖ್ಯೆ: ಸ.ಕಾ.ನಿ.ಅ/ರಾನ/ಪಿಆರ್/ 05/20-21. ದಿನಾಂಕ: 18.11.2020

**ಸಭಾ ಸೂಚನಾ ಪತ್ರ:-**

**ವಿಷಯ:** ವಾರ್ಡ್ ನಂ. 100/ಬಸವೇಶ್ವರನಗರ ವಾರ್ಡ್ ಸಮಿತಿ ಸಭೆಗೆ ಹಾಜರಾಗುವ ಬಗ್ಗೆ

*************

ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ ಆದೇಶದ ರೀತ್ಯಾ ವಾರ್ಡ್ ನಂ. 100/ಬಸವೇಶ್ವರನಗರ ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: **21.11.2020** ರಂದು ಬೆಳಗ್ಗೆ **11:00** ಗಂಟೆಗೆ ವಾರ್ಡ್ ಸಮಿತಿ ಸಭೆಯು ಬಿ.ಬಿ.ಎಂ.ಪಿ. **ವಾರ್ಡ್ ಕಛೇರಿ, ಬಸವೇಶ್ವರನಗರ** ಇಲ್ಲಿ ಜರುಗಲಿದ್ದು, ತಾವುಗಳು ಈ ಸಭೆಗೆ ತಪ್ಪದೇ ಹಾಜರಾಗಲು ಕೋರಲಾಗಿದೆ.

**ಸಭೆಯಲ್ಲಿ ಚರ್ಚಿಸುವ ವಿಷಯಗಳು:-**

1. ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ
2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ
3. ವಾರ್ಡ್‌ಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.
4. ವಾರ್ಡ್‌ನ ವಿವಿಧ ಅಭಿವೃದ್ದಿ ಕಾರ್ಯಗಳ ಬಗ್ಗೆ.
5. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.
6. ಬೀದಿ ದೀಪಗಳ ನಿರ್ವಹಣೆ ಬಗ್ಗೆ.
7. ವಿದ್ಯುತ್ ಸರಬರಾಜು [ಬೆಸ್ಕಾಂ] ಗೆ ಸಂಬಂಧಿಸಿದ ವಿಷಯದ ಬಗ್ಗೆ.
8. S.W.D ಕಾಮಗಾರಿ ಪ್ರಗತಿಯಲ್ಲಿರುವ ಹಿನ್ನಲೆಯಲ್ಲಿ ಮಳೆ ನೀರಿನಿಂದ ಮುಳುಗಡೆಯಾಗುವ ಪ್ರದೇಶಗಳ ಸಮಸ್ಯೆ ಬಗ್ಗೆ.

18/11/2020

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 100

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು [ಪಶ್ಚಿಮ] ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು , ರಾಜಾಜಿನಗರ ವಿಭಾಗ/ಯೋಜನೆ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.

ಪು.ತಿ.ನೋ.

Scanned with CamScanner

5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಘನತ್ಯಾಜ್ಯ] ರಾಜಾಜಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪಗಳ ನಿರ್ವಹಣೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ಬೆಸ್ಕಾಂ] ಉಪವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ರಸ್ತೆ ಮತ್ತು ಮೂಲ ಭೂತ ಸೌಕರ್ಯ.] ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [S.W.D] ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಕಾಂಟ್ರಕ್ಟ್ ಟ್ರೇಸಿಂಗ್, ನೋಡಲ್ ಅಧಿಕಾರಿ
11. ಕಲ್ಯಾಣ ಅಧಿಕಾರಿ, ಪಶ್ಚಿಮ ವಲಯ, ಬಿ.ಬಿ.ಎಂ.ಪಿ. ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಹೋಮ್ ಕ್ವಾರಂಟೈನ್, ಸ್ಕ್ವಾಡ್ ನೋಡಲ್ ಅಧಿಕಾರಿ, ರಾಜಾಜಿನಗರ ವಿಭಾಗ,
13. ಕಲ್ಯಾಣಾಧಿಕಾರಿ, ಪಶ್ಚಿಮ ವಲಯ
14. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಪಶ್ಚಿಮ ವಲಯ
15. ರಾಣಾಧಿಕಾರಿಗಳು, ಬಸವೇಶ್ವರನಗರ
16. ಸಂಚಾರಿ ಪೋಲಿಸ್ ಠಾಣೆ, ವಿಜಯನಗರ
17. ಸಹ ಕಂದಾಯ ಅಧಿಕಾರಿ [ರಾಜಾಜಿನಗರ] ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
18. ಕಚೇರಿ ಕಡತಕ್ಕೆ.

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 100, ಬಸವೇಶ್ವರನಗರ, ಬೆಂಗಳೂರು

ಸಂಖ್ಯೆ:ಸ.ಅ/ವಾ–100/ಪಿಆರ್/ 05 / 2020–21 ದಿನಾಂಕ: 23.11.2020

**ವಾರ್ಡ್ ಸಮಿತಿ ಸಭೆಯ ನಡವಳಿಗಳು:–**

**ವಿಷಯ:** ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ ಆದೇಶ ಸಂಖ್ಯೆ: ಬಿ12[5]ಪಿಆರ್/35/2020–21. ದಿನಾಂಕ: 21.09.2020ರ ಆದೇಶದಂತೆ ದಿನಾಂಕ: 21.11.2020ರಂದು ವಾರ್ಡ್ ನಂ. 100 ಬಸವೇಶ್ವರನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:–**

1. 1. ಶ್ರೀ ದೃವರಾಜ್, ನೋಡಲ್ ಅಧಿಕಾರಿಗಳು, ಎಡಿ.ಟಿ.ಪಿ. ವಾರ್ಡ್ ನಂ. 100
2. ಶ್ರೀಮತಿ ವಿಜಯಲಕ್ಷ್ಮಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀಮತಿ ಸಂಧ್ಯಾ.ಕೆ.ಪಿ. ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಮಂಜುನಾಥ್, ಸಂಚಾರಿ ಪೋಲಿಸ್ ಅಧಿಕಾರಿಗಳು
6. ಶ್ರೀ ಸಂಗಪ್ಪ, ಪೋಲಿಸ್ ಠಾಣಾ ಅಧಿಕಾರಿ,
7. ಶ್ರೀ ಮಾರುತಿ, ಅರಣ್ಯಾಧಿಕಾರಿಗಳು
8. ಶ್ರೀ ಮಲ್ಲೇಶ್, ಕಂದಾಯ ಅಧಿಕಾರಿ
9. ಶ್ರೀ ಮೋಹನ್ ಕುಮಾರ್ , ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿ.

1. ವಾರ್ಡಿನ ಸದಸ್ಯರು ಮಾತನಾಡಿ, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗದಂತೆ ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚಿಸಲಾಗಿತ್ತು. ಆದರೆ ಇದುವರೆವಿಗೂ ರಸ್ತೆ ಗುಂಡಿಗಳನ್ನು ಮುಚ್ಚದಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು. ನೋಡಲ್ ಅಧಿಕಾರಿಗಳು ತ್ವರಿತ ಗತಿಯಲ್ಲಿ ಸಂಪೂರ್ಣವಾಗಿ ವಾರ್ಡಿನ ರಸ್ತೆ ಗುಂಡಿಗಳನ್ನು ಮುಚ್ಚಲು ಸೂಚಿಸಲಾಗಿದ್ದು. ಇದುವರೆವಿಗೂ ಮುಚ್ಚದಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ಶ್ರೀಮತಿ ವಿಜಯಲಕ್ಷ್ಮಿ, ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದರು.

2. ಸದಸ್ಯರು ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಅಸಮದಾನ ವ್ಯಕ್ತಪಡಿಸಿದರು.

ನೋಡಲ್ ಅಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಬೀದಿ ದೀಪದ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ತಿಳಿಸಿದರು.

3. ಸದಸ್ಯರು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವಂತೆ ಪ್ರಸ್ತಾಪಿಸಿದರು.

ನೋಡಲ್ ಅಧಿಕಾರಿಗಳು ಮಾತನಾಡಿ ಸ್ವಲ್ಪ ಮಟ್ಟಿಗೆ ಕಸದ ಸಮಸ್ಯೆಯಲ್ಲಿ ಬದಲಾವಣೆ ಆಗಿರುವ ಬಗ್ಗೆ ಸಮಾಧಾನ ವ್ಯಕ್ತಪಡಿಸಿದರು. ಕೆಲವು ಬ್ಲಾಕ್ ಸ್ಪಾಟ್ ಗಳನ್ನು ತೆರವುಗೊಳಿಸಿರುವ ಬಗ್ಗೆ ಸಮಾಧಾನ ವ್ಯಕ್ತ ಪಡಿಸಿ, ಮಾರ್ಷಲ್ ರವರ ಸಹಾಯದಿಂದ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಂಡು ಇನ್ನುಳಿದ ಬ್ಲಾಕ್ ಸ್ಪಾಟ್‌ಗಳನ್ನು ವಾರ್ಡಿನಲ್ಲಿ ಸಂಪೂರ್ಣವಾಗಿ ತೆರವುಗೊಳಿಸುವಂತೆ ಸೂಚಿಸಿದರು. ಕೆಲವು ಪೌರಕಾರ್ಮಿಕರು ಗ್ಲೌಸ್ ಮತ್ತು ಮಾಸ್ಕ್‌ಗಳನ್ನು ಧರಿಸದೆ ಇರುವ ಬಗ್ಗೆ ಮತ್ತೊಮ್ಮೆ ಅಸಮಧಾನ ವ್ಯಕ್ತ ಪಡಿಸಿ, ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಧರಿಸುವಂತೆ ನಿರ್ದೇಶನ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

ಪು.ತಿ.ನೋ.



Scanned with CamScanner

4. ಸದಸ್ಯರು ಎಸ್.ಡಬ್ಲ್ಯೂ.ಡಿ. ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೊಂಡು ಪೂರ್ಣಗೊಳಿಸಲು ಪ್ರಸ್ತಾಪಿಸಿದರು.

ಇಲ್ಲದಿದ್ದಲ್ಲಿ ಪ್ರತಿ ಮಳೆಯಲ್ಲು 8ನೇ ಮುಖ್ಯ ರಸ್ತೆಯಲ್ಲಿ ಫ್ಲಟ್ಟಿಂಗ್ ಆಗುವ ಭೀತಿಯಿಂದ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಪ್ರಸ್ತಾಪಿಸಿದರು. ಸದರಿ ವಿಷಯವ್ನು ನೋಡಲ್ ಅಧಿಕಾರಿಗಳು ಎಸ್.ಡಬ್ಲ್ಯೂ.ಡಿ.ಅಧಿಕಾರಿಗಳೊಂದಿಗೆ ಚರ್ಚಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ಸದಸ್ಯರು ರವರು ತಿಮ್ಮಯ್ಯ ರಸ್ತೆ ಹಾಗೂ ಪ್ರಿಯದರ್ಶಿನಿ ಹೋಟೆಲ್ ಮುಂದೆ ಇರುವ ಮರದ ಕೊಂಬೆಗಳು ಒಣಗಿದ್ದು, ರಸ್ತೆಯಲ್ಲಿ ಓಡಾಡುವ ವಾಹನ ಸವಾರರ ಮೇಲೆ ಬೀಳುವ ಸಂಭವವಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ನೋಡಲ್ ಅಧಿಕಾರಿಗಳು ಸದರಿ ಸ್ಥಳವನ್ನು ಪರಿಶೀಲಿಸಿ, ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಸ್ಥಳದಲ್ಲಿ ಹಾಜರಿದ್ದ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

23/11/2020

ನೋಡಲ್ ಅಧಿಕಾರಿಗಳು,
ವಾರ್ಡ್ ನಂ. 100/ಬಸವೇಶ್ವರನಗರ.

Scanned with CamScanner